# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS-161/2020** **PW-1**

**ದಿಃ 13.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ಕೆ ವಕೀಲರಿಂದಃ**

**1.** ಎಷ್ಟನೇ ಇಸ್ವಿಯಲ್ಲಿ ಮದುವೆಯಾಯಿತು ಎಂಬುದು ನೆನಪಿಲ್ಲ. ನಾನು ವಿದ್ಯಾಬ್ಯಾಸ ಮಾಡಿರುವದಿಲ್ಲ. ನನ್ನ ಮದುವೆಯಾಗಿ ಸುಮಾರು 34 ವರ್ಷ ವಯಸ್ಸಾಗಿರಬಹುದು. ನನ್ನ ಮಗನಿಗೆ 30 ವರ್ಷ ವಯಸ್ಸಾಗಿರುತ್ತದೆ. ಆತ ತಮ್ಮ ಜೊತೆ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿಯಲ್ಲ. 1 ನೇ ವಾದಿಯು ಸುತಗಟ್ಟಿಯಲ್ಲಿ ವಾಸವಾಗಿರುತ್ತಾರೆ. ಸುತಗಟ್ಟಿ ಮತ್ತು ಉಣಕಲ್ಲ ನಡುವೆ ಸುಮಾರು 6 ರಿಂದ 7 ಕಿ ಮೀಟರ ಅಂತರ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನನ್ನ ತವರು ಮನೆಯಲ್ಲಿ ಯಾವದೇ ಶುಭ ಮತ್ತು ಅಶುಭ ಕಾರ್ಯಗಳಾದರೆ ಗೊತ್ತಾಗುತ್ತದೆಂದರೆ ಸಾಕ್ಷಿಯು 4 ನೇ ಪ್ರತಿವಾದಿಯು ತವರು ಮನೆಗೆ ಕರೆಯುತ್ತಿದ್ದ ಕಾರಣ ಅಲ್ಪಸ್ವಲ್ಪ ಗೊತ್ತಾಗುತ್ತಿತ್ತು ಎನ್ನುತ್ತಾರೆ. ನಾನು ನನ್ನ ಇನ್ನೊಬ್ಬ ವಾದಿಯ ಪರವಾಗಿಯೂ ಸಾಕ್ಷಿ ನುಡಿಯುತ್ತಿದ್ದೇನೆ. 1 ನೇ ವಾದಿ ನನ್ನ ಅಕ್ಕ. 1 ನೇ ವಾದಿಯ ಮನೆಯಿಂದ ನಮ್ಮ ಸಹೋದರನ ಮನೆಯು ಸುಮಾರು 5 ರಿನಂದ 10 ನಿಮಿಷಗಳ ಹ ಾದಿಯಾಗಿರುತ್ತದೆ. 1 ನೇ ವಾದಿಗೆ ತವರು ಮನೆಯಲ್ಲಿ ಏನೆಲ್ಲಾ ಆಗುತ್ತದೆಂಬ ಬಗ್ಗೆ ಮಾಹಿತಿ ಇರುತ್ತದೆಂದರೆ ಸರಿಯಲ್ಲ.

2. ಸರ್ವೆ ನಂಃ 54, 7 ಎಕರೆ 2 ಗುಂಟೆಯು ಸುತಗಟ್ಟಿಯಲ್ಲಿರುತ್ತದೆಂದರೆ ಸರಿ. ಈ ಆಸ್ತಿಯನ್ನು ಕೇಸು ಹಾಕುವ ಪೂರ್ವದಲ್ಲಿ ನೋಡಿರುತ್ತೇನೆ. ಈ ಆಸ್ತಿಯ ಸುತ್ತಮುತ್ತಲೂ ಇರುವ ಜಮೀನುಗಳು ಎನ್ ಎ ಪ್ಲಾಟುಗಳಾಗಿರುತ್ತವೆಂದರೆ ಸಾಕ್ಷಿಯು ನೋಡಿಲ್ಲ ಎನ್ನುತ್ತಾರೆ. ಈ ಆಸ್ತಿಯು ಊರಿನಿಂದ 2-3 ಕಿ ಮೀಟರ ದೂರನಲ್ಲಿರುತ್ತದೆ. ಸರ್ವೆ ನಂಃ 70 ಸಹ ಗ್ರಾಮದಿಂದ 2-3 ಕಿ ಮೀಟರ ದೂರದಲ್ಲಿರುತ್ತದೆ. ಸುತಗಟ್ಟಿ ಸುತ್ತಮುತ್ತಲೂ ಈಗ ಸುಮಾರು ಲೇಔಟಗಳಾಗಿರುತ್ತವೆ. ಸುತಗಟ್ಟಿ ಗ್ರಾಮದಲ್ಲಿ ಕಾನಕಾರ್ಡ ರವರ ಲೇಔಟಗಳು ಇರುತ್ತವೆಂದರೆ ಸರಿ. ಶೆಡ್ಯೂಲ ಎ ನ ಕ್ರಮ ಸಂಖ್ಯೆ 1 ರ

ಆಸ್ತಿಗೂ ಕಾನಕಾರ್ಡ ಲೇಔಟಗೂ ಎಷ್ಟು ದೂರ ಆಗುತ್ತದೆಂದರೆ ಸಾಕ್ಷಿಯು ಎರಡು ಕಿ ಮೀಟರ ದೂರ ಆಗುತ್ತದೆ ಎನ್ನುತ್ತಾರೆ. ಈ ಆಸ್ತಿಯು ಈಗ ಯಾರ ಹೆಸರಿನಲ್ಲಿದೆ ಎಂಬುದು ಓದಲು ಬರದ ಕಾರಣ ಗೊತ್ತಿಲ್ಲ. ಅದೇ ರೀತಿಯಾಗಿ ಕ್ರಮ ಸಂಖ್ಯೆ 2 ಎ ದಿಂದ 2 ಸಿ ಆಸ್ತಿಗಳು ಯಾರ ಹೆಸರಿನಲ್ಲಿದೆ ಎಂಬುದು ಓದಲು ಬರದ ಕಾರಣ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವು ಆಂಗ್ಲ ಬಾಷೆಯಲ್ಲಿದ್ದು ಅದರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಹಕ್ಕು ಬದಲಾವಣೆ ವಹಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಗೂ ಹಾಜರುಪಡಿಸಬೇಕೆಂದು ಗೊತ್ತಾಗಲಿಲ್ಲ. ನಾವು ಈ ದಾವೆಯನ್ನು ಎರಡು ಆಸ್ತಿಗೆ ಸಂಬಂದಿಸಿದಂತೆ ಮಾಡಿರುತ್ತೇವೆ. ಆ ಎರಡು ಆಸ್ತಿಗಳೆಂದರೆ 7 ಎಕರೆ ಮತ್ತು 6 ಎಕರೆ ಆಗಿರುತ್ತದೆ. ಈ ಆಸ್ತಿಗಳು ಬಸಪ್ಪನಿಗೆ ಅವರ ತಂದೆಯಿಂದ ಬಂದಿರುತ್ತವೆ. ಬಸಪ್ಪನಿಗೆ ಅವರ ತಂದೆಯಿಂದ ಈ ಆಸ್ತಿಗಳು ಬಂದ ಬಗ್ಗೆ ಉತಾರವನ್ನು ಹಾಜರುಪಡಿಸುತ್ತೇನೆ. ನನಗೆ ಓದಲು ಬರದ ಕಾರಣ ಈ ಎರಡೂ ಆಸ್ತಿಗಳು ಹಿರಿಯರ ಆಸ್ತಿ ಎಂದು ಹೇಳಲು ಯಾವೆಲ್ಲಾ ದಾಖಲೆ ಪರಿಶೀಲಿಸಿರುತ್ತೇನೆಂಬುದು ಹೇಳಲು ಬರುವದಿಲ್ಲ.

4. ಬ್ಲಾಕ ನಂ 70 ರಲ್ಲಿನ ಒಟ್ಟು 6 ಎಕರೆ 18 ಗುಂಟೆಯಲ್ಲಿ 1 ಎಕರೆಯನ್ನು ಮೊದಲಿಗೆ ಶೆಟ್ಟರ ಎಂಬುವವರಿಗೆ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಮತ್ತೊಂದು ಎಕರೆಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಸದರಿ 7 ನೇ ಪ್ರತಿವಾದಿಯ ಮೇಲೆ ಏನಾದರೂ ಪ್ರಕರಣ ಹಾಕಿರುತ್ತೀರಾ ಎಂದರೆ ಸಾಕ್ಷಿಯು ನನ್ನ ವಕೀಲರೇ ಉತ್ತರಿಸಬೇಕು ಎನ್ನುತ್ತಾರೆ. ಸರ್ವೆ ನಂಃ 70 ಪೋಡಿಯಾಗಿ ಎಷ್ಟು ಉತಾರ ಆಗಿರುತ್ತವೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂಃ 70 ರಲ್ಲಿ ಯಾರಿಗೆ ಎಷ್ಟು ಎಕರೆಗಳನ್ನು ಮಾರಾಟ ಮಾಡಿರುತ್ತಾರೆಂಬುದು ಸಹ ನನಗೆ ಗೊತ್ತಿಲ್ಲ. ದಾವಾ ಎ ಶೆಡ್ಯೂಲನ ಕ್ರಮ ಸಂಖ್ಯೆ 2 ಎ ಆಸ್ತಿಯು 2013 ರಲ್ಲಿ ವಾಟ್ನೀಯಾಗಿರುತ್ತದೆಂದರೆ ಗೊತ್ತಿಲ್ಲ. ತಾವು ಹಾಜರುಪಡಿಸಿರುವ ಉತಾರದಲ್ಲಿಯೇ ಈ ಕ್ರಮ ಸಂಖ್ಯೆ ಆಸ್ತಿಯು ವಿಭಾಗ ಆದ ಬಗ್ಗೆ ಹಾಗೂ ಹಕ್ಕು ಬದಲಾವಣೆ ಆದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಗಿರುತ್ತದೆ.

2013 ರಲ್ಲಿ ಆಗಿರುವ ವಾಟ್ನೀಯನ್ನು ತಾವೇನಾದರೂ ಈ ಪ್ರಕರಣದಲ್ಲಿ ಪ್ರಶ್ನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನನ್ನ ಅಣ್ಣ ತಮ್ಮಂದಿರ ಹೆಸರಿನಲ್ಲಿ ಮತ್ತು ತಾಯಿಯವರ ಹೆಸರಿನಲ್ಲಿ ಎಷ್ಟು ಎಕರೆ ದಾಖಲಾಗಿರುತ್ತದೆಂದು ನಾನು ನನ್ನ ವಕೀಲರಿಂದ ಓದಿಸಿ ತಿಳಿದುಕೊಂಡಿರುವದಿಲ್ಲ. 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿ ಕ್ರಮವಾಗಿ ನಿಪಿ 14 ರಲ್ಲಿ ಉಲ್ಲೇಖಿಸಿರುವ ರೀತಿ ಆಸ್ತಿಗಳು ದಾಖಲಾಗಿರುತ್ತವೆಂದರೆ ಗೊತ್ತಿಲ್ಲ. ನನ್ನ ವಕೀಲರಿಗೆ ಮಾಹಿತಿಯನ್ನು ಕೊಟ್ಟಿದ್ದು ಅವರು ಈ ಪ್ರಕರಣದಲ್ಲಿ ಹನುಮಂತಪ್ಪ ಕರೆಪ್ಪ ಇಡ್ಲಿ ರವರನ್ನು ಪಕ್ಷಗಾರರಾಗಿ ಮಾಡಿರುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ವಕೀಲರಿಗೆ ಆಸ್ತಿ ಇದ್ದು ಭಾಗ ಕೊಡಿಸಿ ಎಂದು ಮಾತ್ರ ತಿಳಿಸಿದ್ದು ಅದು ಯಾರಿಂದ ಬಂದಿರುತ್ತದೆ ಮತ್ತು ಯಾರಿಗೆಲ್ಲಾ ಮಾರಾಟವಾಗಿರುತ್ತದೆಂಬ ಬಗ್ಗೆ ಮಾಹಿತಿ ಕೊಟ್ಟಿಲ್ಲ. ದಾವಾ ಶೆಡ್ಯೂಲ-ಅ ನ ಕ್ರಮ ಸಂಖ್ಯೆ 1 ಆಸ್ತಿಯು ಸಂಪೂರ್ಣವಾಗಿ 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಮಾರಾಟ ಮಾಡಿದ ಆಸ್ತಿಗಳನ್ನು ಬಿಟ್ಟು ಬೇರೆ ಆಸ್ತಿಗಳಲ್ಲಿ ವಿಭಾಗ ಕೊಟ್ಟರೆ ಯಾವದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಮಾರಾಟ ಮಾಡಿದ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಭಾಗಕ್ಕೆ ಎಷ್ಟು ಎಕರೆ ಆಸ್ತಿ ಬರುತ್ತದೆಂಬುದು ಗೊತ್ತಿಲ್ಲ. ತಮ್ಮ ಮನೆತನಕ್ಕೆ ಇರುವ ಆಸ್ತಿಯಲ್ಲಿ ತಮಗೆ ಕಾನೂನು ಬದ್ದವಾಗಿ ಬರಬೇಕಾದ ಹಿಸ್ಸೇಯನ್ನು ಕೊಟ್ಟರೆ ತಮಗೇನೂ ತಕರಾರು ಇಲ್ಲ ಎಂದರೆ ಸರಿ. ನಾನು ಕೇವಲ ಆಸ್ತಿಗಳ ಉತಾರವನ್ನು ಮಾತ್ರ ಕೊಟ್ಟಿರುತ್ತೇನೆ. ನನ್ನ ಮಗ ಸಂಜೀವ ಮತುತ ನಾನು ಹೋಗಿ ದಾವಾ ಆಸ್ತಿಯ ಉತಾರವನ್ನು ಅರ್ಜಿ ಕೊಟ್ಟು ತೆಗೆಸಿರುತ್ತೇನೆ. ನಾನು ಸಬ್ ರಜಿಸ್ಟ್ರರ ಕಚೇರಿಗೆ ಹೋಗಿ ಯಾವದೇ ಅರ್ಜಿಯನ್ನು ಕೊಟ್ಟು ಯಾವದೇ ದಾಖಲೆಯನ್ನು ಪಡೆದಿರುವದಿಲ್ಲ. ನನ್ನ ಮಗ ಸಬ್ ರಜಿಸ್ಟ್ರರ ಕಚೇರಿಯಿಂದ ಯಾವೆಲ್ಲಾ ದಾಖಲೆ ಪಡೆದಿರುತ್ತಾರೆಂಬುದು ಗೊತ್ತಿಲ್ಲ. ತಾವು ಮತ್ತು ತಮ್ಮ ಸಹೋದರ ಸಹೋದರಿಯರು ಹಾಗೂ ತಾಯಿಯವರು ಸೇರಿ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದರೂ ಈಗ ಖರೀದಿದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂಃ 70 ರಲ್ಲಿ ಎಷ್ಟನೇ ಇಸ್ವಿಯಲ್ಲಿ ಮಾರಾಟವಾಗಿರುತ್ತದೆಂಬುದು ಗೊತ್ತಿಲ್ಲ. ಅಸಲರ್ಜಿಯು ಆಂಗ್ಲ ಬಾಷೆಯಲ್ಲಿದ್ದು ಅದರಲ್ಲಿ ಏನೆಲ್ಲಾ ಬರೆದಿದೆ ಎಂಬುದು ನನಗೆ ಗೊತ್ತಿಲ್ಲ.

5. 7 ನೇ ಪ್ರತಿವಾದಿಯು ಸರ್ವೆ ನಂಃ 70 ರಲ್ಲಿ 1 ಎಕರೆ ಯನ್ನು ದಿನಾಂಕ ಃ 13.07.2007 ರಲ್ಲಿ ಖರೀದಿ ಮಾಡಿರುತ್ತಾರೆಂದರೆ ಗೊತ್ತಿಲ್ಲ.

**ಪಾಟೀ ಸವಾಲು ಃ 11 ನೇ ಪ್ರತಿವಾದಿ ಪರ ಶ್ರೀ ಎ ವಿ ಎಸ್ ವಕೀಲರಿಂದ ಃ**

6. ಈ ದಾವೆಯನ್ನು ಆಸ್ತಿ ಬೇಕೆಂದು ಹಾಕಿರುತ್ತೇನೆ. ಈ ರೀತಿ ಕೇಳಬೇಕೆಂದು ನನಗೆ ಯಾರೂ ಹೇಳಿಕೊಟ್ಟಿರುವದಿಲ್ಲ. ನನ್ನ ತಾಯಿಯ ಹೆಸರು ಬೀಮವ್ವ ಆಗಿದ್ದು ವಂಶಾವಳಿಯಲ್ಲಿ ಬಸವ್ವ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ನನ್ನ ಸಹೋದರ ಹಾಗೂ ಸಹೋದರಿಯರ ನಡುವೆ ಯಾವದೇ ರೀತಿಯ ಜಗಳ ಇರುವದಿಲ್ಲ. ಈ ದಾವೆಯಲ್ಲಿ 11 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಸೇರಿಸಲಾಗಿದೆ ಎಂಬುದು ನನಗೆ ಗೊತ್ತಿಲ್ಲ ನನ್ನ ವಕೀಲರಿಗೆ ಗೊತ್ತಿರುತ್ತದೆ. 2001 ರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. ತಮ್ಮ ತಂದೆ ಮರಣ ಹೊಂದಿದ 18 ವರ್ಷಗಳ ನಂತರ ಈ ಪ್ರಕರಣವನ್ನು ಹಾಕಿರುತ್ತೀರಿ ಎಂದರೆ ಸರಿ. ಎರಡು ಆಸ್ತಿಗಳನ್ನು ಬಿಟ್ಟು ಮನೆ ಆಸ್ತಿಯೂ ಸಹ ಈ ದಾವೆಯಲ್ಲಿ ಸೇರಿಸಲಾಗಿರುತ್ತದೆ. ಕ್ರಮ ಸಂಖ್ಯೆ 4 ರಲ್ಲಿ ನಮೂದಿಸಿರುವ ಆಸ್ತಿ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಮಗ ಉತಾರ ತೆಗೆಸಿಕೊಟ್ಟಿರುತ್ತಾನೆ. ಅದು ಮೊದಲು ಯಾರ ಹೆಸರಿಗೆ ಇತ್ತು ಎಂಬುದು ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂ. 4 ರಲ್ಲಿರುವ ಆಸ್ತಿಯನ್ನು ತಮ್ಮ ತಂದೆ ಮರಣ ಹೊಂದಿದ ನಂತರ 2 ರಿಂದ 4 ನೇ ಪ್ರತಿವಾದಿಯರು ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಅದನ್ನು ಮನೆತನದ ಅಡಚಣೆಗಾಗಿ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. 11 ನೇ ಪ್ರತಿವಾದಿಯು ಹೆಚ್ಚಿನ ಬೆಲೆಗೆ ಖರೀದಿ ಮಾಡಿದಂತಹ ಪ್ರಾಮಾಣಿಕ ಖರೀದಿದಾರರು ಎಂದರೆ ಗೊತ್ತಿಲ್ಲ. ತಾವು 2 ರಿಂದ 4 ನೇ ಪ್ರತಿವಾದಿಯರ ಮಾತು ಕೇಳಿಕೊಂಡು ಈ ಪ್ರತಿವಾದಿಯ ಮೇಲೆ ಸುಳ್ಳು ದಾವೆಯನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಅವರಿಂದ ಹೆಚ್ಚಿನ ಹಣ ಪಡೆಯಬೇಕೆಂಬ ಉದ್ದೇಶದಿಂದ ಅವರನ್ನು ಪಕ್ಷಗಾರರಾಗಿ ಮಾಡಿ ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಭೂಮಿಯ ಬೆಲೆಯ ಹೆಚ್ಚಾದ ಕಾರಣ ತಮ್ಮ ಸಹೋದರರು ತಮ್ಮಿಂದ ಈ ಸುಳ್ಳು ದಾವೆಯನ್ನು ಹಾಕಿಸಿರುತ್ತಾರೆಂದರೆ ಸರಿಯಲ್ಲ. ಎರಡು ವರ್ಷದ ಹಿಂದೆ ಹಿಸ್ಸೇ ಕೊಡಿ ಎಂದು ನಾನು ನನ್ನ ಅಣ್ಣತಮ್ಮಂದಿರ ಬಳಿ ಕೇಳಿರುತ್ತೇನೆ. 2 ರಿಂದ 4 ನೇ ಪ್ರತಿವಾದಿಯರ

ಹೆಸರು ಮಾತ್ರ ದಾವಾ ಶೆಡ್ಯೂಲ ಅ ನ 4 ನೇ ಕ್ರಮ ಸಂಖ್ಯೆಯಲ್ಲಿದ್ದ ವಿಚಾರ ಹಾಗೂ ಅದನ್ನು ಮಾರಾಟ ಮಾಡಿದ ವಿಚಾರ ಎಲ್ಲಾ ಗೊತ್ತಿದ್ದರೂ 11 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಬೇರೆಯವರ ಮಾತು ಕೇಳಿಕೊಂಡು ಸುಳ್ಳು ಪ್ರಕರಣ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 4 ರಲ್ಲಿ ತಮಗೆ ಯಾವದೇ ರೀತಿಯ ಹಿಸ್ಸೇ ಇರುವದಿಲ್ಲ ಎಂದರೆ ಸರಿಯಲ್ಲ.

**ನ್ಯಾಯಾಲಯದ ಅನುಮತಿಯೊಂದಿಗೆ 7 ನೇ ಪ್ರತಿವಾದಿ ಪರ ವಕೀಲರಿಂದ ಮುಂದುವರೆದ ಪಾಟೀ ಸವಾಲು :**

7 ನೇ ಪ್ರತಿವಾದಿಯ ಖರೀದಿ ಮಾಡಿದ ಆಸ್ತಿಯಲ್ಲಿ ಈಗ ಸಾಕಷ್ಟು ಅಬಿವೃದ್ಧಿಯನ್ನು ಪಡಿಸಿ ಮಾವು, ಸಪೋಟಾ ಮುಂತಾದ ಮರಗಳನ್ನು ಬೆಳೆಸಿರುತ್ತಲಾರೆಂದರೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಈಗ 7 ನೇ ಪ್ರತಿವಾದಿಯು ಫಾರ್ಮ ಹೌಸನ್ನು ಕಟ್ಟಿ ಬೋರವೆಲ್ಲನ್ನು ಹಾಕಿಸಿರುತ್ತಾರೆಂದರೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ಅವರ ತಂದೆ ಮರಣ ಹೊಂದಿದ ನಂತರ ಅವರ ತಂದೆಯ ಗದ್ದುಗೆಯನ್ನು ಸದರಿ ಖರೀದಿ ಮಾಡಿದ ಆಸ್ತಿಯಲ್ಲಿ ಕಟ್ಟಿರುತ್ತಾರೆಂದರೆ ಸಾಕ್ಷಿಯು ಇತ್ತೀಚೆಗೆ ಹೋಗದ ಕಾರಣ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಯು ಈಗ 4 ನೇ ಪ್ರತಿವಾದಿಯ ಜೊತೇ ಇರುತ್ತಾರೆ. ಭೂಮಿಯ ಬೆಲೆ ಹೆಚ್ಚಾದ ಕಾರಣ 1 ರಿಂದ 4 ನೇ ಪ್ರತಿವಾದಿಯರು ತಮ್ಮ ಮುಖಾಂತರ ಈ ಸುಳ್ಳು ದಾವೆಯನ್ನು ಮಾಡಿಸ ಖರೀದಿದಾರರಿಂದ ಹೆಚ್ಚಿನ ಹಣ ಪಡೆಯಲು ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆಂದರೆ ಸರಿಯಲ್ಲ. 7 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಯರ ಹೆಸರು ಉತಾರದಲ್ಲಿದ್ದ ಕಾರಣ ಖರೀದಿ ಮಾಡಿದ್ದು ತಮಗೆ ಯಾವದೇ ರೀತಿಯ ಹಕ್ಕು ಇರುವದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ಉತಾರದಲ್ಲಿ ನನ್ನ ಹೆಸರು ದಾಖಲಿಸಿಕೊಳ್ಳಲು ಪ್ರಯತ್ನಪಟ್ಟಿಲ್ಲ ಬದಲಿಗೆ ನನ್ನ ಸಹೋದರರು ತಮ್ಮ ಹೆಸರನ್ನು ಹಚ್ಚುವಾದಾಗಿ ಹೇಳಿರುತ್ತಾರೆಂದು ನುಡಿಯುತ್ತಾರೆ. ಉತಾರದಲ್ಲಿ ನನ್ನ ಹೆಸರಾಗಲಿ, 1 ನೇ ವಾದಿಯ ಹೆಸರಾಗಲಿ, 5 ನೇ ಪ್ರತಿವಾದಿಯ ಹೆಸರಾಗಲಿ ಇರುವದಿಲ್ಲ ಎಂದು ನುಡಿದು ಮುಂದೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ನನ್ನ ಸಹೋದರರ ಹೆಸರು ದಾಖಲಾಗಿರುವದನ್ನು ಪ್ರಶ್ನಿಸಿ ಸಂಬಂದಪಟ್ಟ ಪ್ರಾದಿಕಾರದ ಮುಂದೆ ಯಾವದೇ ಅಪೀಲು ಮಾಡಿರುವದಿಲ್ಲ. 7ನೇ ಪ್ರತಿವಾದಿಯು ಪ್ರಾಮಾಣಿಕ ಖರೀದಿದಾರರ ಆಗಿದ್ದು ಅವರಿಗೆ ತೊಂದರೆ ಕೊಡಲು ಈ ದಾವೆಯನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 8 ರಿಂದ 10 ರ ವಕೀಲರು ಮತ್ತು ಪಕ್ಷಗಾರರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**